ಉದ್ಯಾನ ಇಲಾಖೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಸುತ್ತೋಲೆ

ಕೆಯು/ ಉದ್ಯಾನ/2026-27/ ದಿನಾಂಕ : 2-11-2026

ಕರ್ನಾಟಕ ಕಾಲೇಜು ಆವರಣದಲ್ಲಿ ಮುಖ್ಯ ದ್ವಾರದ ಹತ್ತಿರ ವೀರರಾಣಿ ಚನ್ನಮ್ಮಾ ಪುತ್ತಳಿ ಸ್ಥಾಪನೆ ಮಾಡು ಜಾಗದಲ್ಲಿ ಇರುವ ಗಿಡಗಳನ್ನು ಇದ್ದ ಸ್ಥಿತಿಯಲ್ಲಿ ಟೆಂಡರ/ಬಹಿರಂಗ ಹರಾಜು ಮೂಲಕ ಮಾರಾಟ ಮಾಡಲು ಉದ್ಯಾನ ಇಲಾಖೆಯಲ್ಲಿ ಏರ್ಪಡಿಸಲಾಗಿದೆ.

ಅ. ನಂ	ಪಸಲುಗಳ ವಿವರಣೆ	ಹರಾಜಿನಲ್ಲಿ ಭಾಗವಹಿಸಲು ಕಟ್ಟಬೇಕಾದ ಠೇವಣಿ ಹಣ	ಪಸಲು ತೆಗೆದಕೊಂಡವರು ಕಟ್ಟಬೇಕಾದ ಠೇವಣಿ ಹಣ
1	ಸೀಮೆ ತಂಗಡಿ ಗಿಡಗಳು- 29	3000=00	1000=00

ಟೆಂಡರ ಕರಾರುಗಳು

1. ಮೇಲೆ ತಿಳಿಸಿದ ಸ್ಥಳದಲ್ಲಿರುವ ಗಿಡಗಳ ಪಸಲುಗಳನ್ನು ಚನ್ನಾಗಿ ಗುರುತಿಸಿಕೊಂಡು ಇಷ್ಟವಾದಲ್ಲಿ **FINANCE OFFICER, KARNATAK UNIVERSITY, DHARWAD** ಇವರ ಹೆಸರಲ್ಲಿ ಭಾಗವಹಿಸಲು ಕಟ್ಟಬೇಕಾದ ಹಣದ **ಡಿ.ಡಿ ಯೊಂದಿಗೆ ತಮ್ಮ ಟೆಂಡರ ದರವನ್ನು ನಿಗದಿತ ಪಾರ್ಮನಲ್ಲಿ ಬರೆದು ಟೆಂಡರ ಡಬ್ಬದಲ್ಲಿ ಹಾಕಬೇಕು. ಟೆಂಡರ ಪಾರ್ಮನ್ನು ರೂ. 500=00 ಚಲನ್ ಕಟ್ಟಿ ಅದರ ಪ್ರತಿ ರೂ. 90=00 (ಜಿ.ಎಸ್.ಟಿ) ಹಣವನ್ನು ನಗದು ರೂಪದಲ್ಲಿ ನೀಡಿದ ನಂತರ ಟೆಂಡರ ಪಾರ್ಮ ನೀಡಲಾಗುವದು.** ಟೆಂಡರ ಪಾರ್ಮಿಗೆ ತುಂಬಿದ ಹಣವನ್ನು ಯಾವುದೇ ಕಾರಣಕ್ಕೆ ಮರಳಿಸುವದಿಲ್ಲಾ. ಟೆಂಡರನಲ್ಲಿ ಭಾಗವಹಿಸುವವರು ಕಡ್ಡಾಯವಾಗಿ ಟೆಂಡರ ಪಾರ್ಮ ಪಡೆಯಲೇಬೇಕು. ಟೆಂಡರದಾರರು ಕಡ್ಡಾಯವಾಗಿ ಅಧಿಕೃತ ವಿಳಾಸದ ಪುರಾವೆ ಲಗತ್ತಿಸಬೇಕು.

2. **ದಿನಾಂಕ : 12-11-2026 ರಂದು ಮದ್ಯಾಹ್ನ 3.00 ಗಂಟೆಯೊಳಗಾಗಿ** ಉದ್ಯಾನ ಇಲಾಖೆಯಲ್ಲಿರುವ ಶೀಲು ಮಾಡಿದ ಟೆಂಡರ ಬಾಕ್ಸನಲ್ಲಿ ಹಾಕಬೇಕು. ತದನಂತರ ಬಂದವರನ್ನು ಪರಿಗಣಿಸುವದಿಲ್ಲಾ. ಅದೇ ದಿನ ಮದ್ಯಾಹ್ನ **3.30** ಗಂಟೆಗೆ ಬಹಿರಂಗ ಹರಾಜು ಏರ್ಪಡಿಸಲಾಗುವದು. ಬಹಿರಂಗ ಹರಾಜು ಮುಗಿದ ನಂತರ ಟೆಂಡರ ಬಾಕ್ಸನಲ್ಲಿರುವ ಮೋಹರಾದ ಟೆಂಡರಗಳನ್ನು ತೆರೆದು ನೋಡಲಾಗುವದು. ಇವರಡರಲ್ಲಿ ಯಾರ ಬೆಲೆಯು ಹೆಚ್ಚು ಇರುವದೋ ಅವರಿಗೆ ಪಸಲು ಹರಾಜು ಸಮೀತಿ ಸದಸ್ಯರಿಗೆ ಹಾಗೂ ಮೇಲಾಧಿಕಾರಿಗಳಿಗೆ ಒಪ್ಪಿಗೆಯಾದಲ್ಲಿ ಮಾತ್ರ ಪಸಲುಗಳನ್ನು ನೀಡಲಾಗುವದು.

3. ಟೆಂಡರ/ಬಹಿರಂಗ ಹರಾಜಿನಲ್ಲಿ ಹೆಚ್ಚಿನ ಬೆಲೆಗೆ ಗಿಡಗಳನ್ನು ಪಡೆದವರು ಪಸಲು ಹರಾಜು ಸಮೀತಿ ಸದಸ್ಯರು ಒಪ್ಪಿಗೆ ನೀಡಿದಲ್ಲಿ ಪಸಲು ಮೊತ್ತದಲ್ಲಿ ಠೇವಣಿ ಹಣ ವಜಾಗೊಳಿಸಿ ಉಳಿದ ಹಣದ 75% ಹಣವನ್ನು ಮರುದಿನ ಬ್ಯಾಂಕಿನ ಅವಧಿಯೊಳಗೆ ತುಂಬಬೇಕು. ಒಂದು ವೇಳೆ ತಾವು ಹಣವನ್ನು ತುಂಬದಿದ್ದಲ್ಲಿ ತಾವು ತುಂಬಿದ ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಂಡು ಅದೇ ವೇಳೆಯಲ್ಲಿ ತಾವು ಕೊಂಡ ಪಸಲುಗಳನ್ನು ಎರಡನೇ ಹೆಚ್ಚಿನ ಬೇಡಿಕೆದಾರಾರಿಗೆ ನೀಡಬಹುದಾಗಿದೆ.

4. ಟೆಂಡರ ದರಗಳು ಮೇಲಾಧಿಕಾರಿಗಳಿಂದ ಒಪ್ಪಿಗೆ ಪಡೆದ ನಂತರ ಇನ್ನೂಳಿದ ಹಣವನ್ನು ತುಂಬಲು ತಿಳಿಸಲಾಗುವದು. ನಿಗದಿತ ಸಮಯದಲ್ಲಿ ಹಣವನ್ನು ತುಂಬದಿದ್ದಲ್ಲಿ ತಾವು ತುಂಬಿದ ಠೇವಣಿ ಹಣ ಮತ್ತು 75% ತುಂಬಿದ ಹಣವನ್ನು ಮುಟ್ಟುಗೋಲು ಹಾಕಿಕೊಳಲಾಗುವದು. ಮೇಲ್ಕಂಡ ಗಿಡಗಳಿಗೆ ಯೋಗ್ಯ ಬೆಲೆ ಬಾರದಿದ್ದರೆ ಟೆಂಡರ/ಬಹಿರಂಗ ಹಾರಾಜು ದರವನ್ನು ಸ್ವೀಕರಿಸುವ ಅಥವಾ ನಿರಾಕರಿಸುವ ಹಕ್ಕನ್ನು ಮೇಲಾಧಿಕಾರಿಗಳಿಗೆ ಕಾಯ್ದಿರಿಸಿದೆ.

5. ಟೆಂಡರನ್ನಲ್ಲಿ ಭಾಗವಹಿಸಿ ಹಚ್ಚಿಗೆ ಬೇಡಿಕ ಸಲ್ಲಿಸಿ ಗಿಡಗಳ ಹಣವನ್ನು ಸಂಪೂರ್ಣವಾಗಿ ತುಂಬಿ ಗಿಡಗಳ್ನು ತೆಗೆದುಕೊಂಡು ಹೋಗುವ ಅನುಮತಿ ಪಡೆದ ನಂತರವೂ ಪಸಲು ವಿಲೇವಾರಿಗೆ ಏನಾದರು ಸಮಸ್ಯಗಳು ಬಂದಲ್ಲಿ ಮೇಲಾಧಿಕಾರಿಗಳು ಸದರ ವಿಷಯಕ್ಕೆ ಸಂಬಂದಿಸಿದಂತೆ ತೆಗೆದಕೊಳ್ಳುವ ನಿರ್ಣಯವೇ ಅಂತಿಮ. ಅದಕ್ಕೆ ತಂಟೆ ತಕರಾರುಗಳನ್ನು ಪರಿಗಣಿಸುವದಿಲ್ಲಾ.

6. ನಿಯಮಾನುಸಾರ ಸರಕಾರಕ್ಕೆ ತುಂಬಬೇಕಾದ **CGST, SGST, In-come Tax and etc.** ಮತ್ತು ಅರಣ್ಯ ಇಲಾಖೆಗೆ ತುಂಬಬೇಕಾದ ಎಪ್.ಡಿ.ಟಿ ಹಣದ ಡಿ.ಡಿ ಯನ್ನು ನಿಗದಿತ ತಿಳಿಸಿದ ಸಮಾಯದೊಳಗೆ ತುಂಬಬೇಕು. ಮತ್ತು ರಶೀದಿಗಳನ್ನು ಉದ್ಯಾನ ವಿಭಾಗಕ್ಕೆ ಸಲ್ಲಿಸಬೇಕು . ತದನಂತರ ಗಿಡಗಳನ್ನು ತಮ್ಮ ವಶಕ್ಕೆ ನೀಡಲು ಆದೇಶ ಮಾಡಲಾಗುವದು. ನಮ್ಮ ಆದೇಶಹ ಪಡೆದ ನಂತರ ಅರಣ್ಯ ಇಲಾಖೆಯ ನಿಯಮದಂತೆ ಮರ ಅಧಿಕಾರಿಗಳಾದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಧಾರವಾಡ ಉಪ ವಿಭಾಗ , ಧಾರವಾಡ ಇವರಿಂದ ಗಿಡಗಳನ್ನು ಕಟಾವಣೆ ಮಾಡುವದಕ್ಕೆ ಅನುಮತಿ ಪಡೆದು ಉದ್ಯಾನ ವಿಭಾಗಕ್ಕೆ ಸಲ್ಲಿಸಿದ ನಂತರವೇ ಗಿಡಗಳನ್ನು ಕಟಾವು ಮಾಡಬೇಕು. ಇದಕ್ಕೆ ಸಂಬಂದಿಸಿದಂತೆ ಅರಣ್ಯ ಇಲಾಖೆಗೆ ಏನಾದರೂ ಹಣ ತುಂಬಬೇಕಾಗಿ ಬಂದಲ್ಲಿ ಗಿಡಗಳನ್ನು ತೆಗೆದುಕೊಂಡವರು ತುಂಬಬೇಕು.

7. ಪಸಲುಗಳನ್ನು ತೆಗೆಯುವಾಗ ಏನಾದರು ಅನಾಹುತ ಸಂಬವಿಸಿದಲ್ಲಿ ವಿಶ್ವವಿದ್ಯಾಲಯವು ಜವಾಬ್ದಾರವಲ್ಲಾ. ಏನಾದರು ವಿಶ್ವವಿದ್ಯಾಲಯಕ್ಕೆ, ಹಾನಿಯಾದಲ್ಲಿ ವಿಶ್ವವಿದ್ಯಾಲಯದ ಆಡಳಿತಾಧಿಕಾರಿಗಳು ತೆಗೆದಕೊಳ್ಳುವ ನಿರ್ಣಯಾವೇ ಅಂತಿಮ. ಗಿಡಗಳಿಂದ ಲಾಭವಾಗಲಿ ಅಥವಾ ಹಾನಿಯಾಗಲಿ ಅದಕ್ಕೆ ವಿಶ್ವವಿದ್ಯಾಲಯವು ಜಬ್ದಾರವಾಗಿರುವದಿಲ್ಲಾ.

8. ಟೆಂಡರ ನಡೆಯುವಾಗ ಶಾಂತತೆ ಕಾಪಾಡದಿದ್ದರೆ ಮತ್ತು ಏನಾದರೂ ತೊಂದರೆಯಾದಲ್ಲಿ ಟೆಂಡರನ್ನು ರದ್ದುಗೊಳಿಸಲಾಗುವದು. ಹೆಚ್ಚಿನ ಮಾಹಿತಿಗಾಗಿ ಉದ್ಯಾನ ಇಲಾಖೆ ಕರ್ನಾಟಕ ವಿಶ್ವವಿದ್ಯಾಲಯ ಧಾರಾವಾಡ ದಲ್ಲಿ ಕಚೇರಿ ವೇಳೆಯಲ್ಲಿ ವಿಚಾರಿಸಬಹುದು. ಮೂ. ನಂ. 8762270302

02/11/26

ಕುಲಸಚಿವರು

Scanned with OKEN Scanner